OS. 260/2020 PW1

ದಿಃ 08-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಹೆಚ್ ಬಿ ಎಸ್ ವಕೀಲರಿಂದ</u>

ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ದಾಸರಕಲ್ಲಹಳ್ಳಿ ಗ್ರಾಮ ಭದ್ರಾವತಿಯಿಂದ 12 ಕಿ.ಮೀ ದೂರದಲ್ಲಿದೆ. ಅಲ್ಲಿ ಗ್ರಾಮ ಪಂಚಾಯಿತಿ ಇರುತ್ತದೆ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ತಂದೆಗೆ ಸ.ನಂ. 70 ರಲ್ಲಿ 2 ಕಾಲ್ ಎಕರೆ ಜಮೀನು ಇತ್ತು. ನನ್ನ ತಂದೆಯ ಹೆಸರಿಗೆ ನಿವೇಶನ ಹಾಗೂ ಮನೆ ಇತ್ತು. ಅದಕ್ಕೆ ಸಂಬಂಧಿಸಿದ ದಾಖಲೆಗಳು ದಾಸರಕಲ್ಲಹಳ್ಳಿ ಗ್ರಾಮ ಪಂಚಾಯಿತಿ ಇತ್ತು . ನನ್ನ ತಂದೆಗೆ ಒಟ್ಟು 5 ಜನಗಂಡು ಮಕ್ಕಳು ಹಾಗೂ 4 ಜನ ಹೆಣ್ಣು ಮಕ್ಕಳು . ನನ್ನ ತಂದೆ 2012 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ಅಕ್ಕ ಒಬ್ಬರು ಮರಣ ಹೊಂದಿರುತ್ತಾರೆ. ನಾವು 5 ಜನ ಗಂಡು ಮಕ್ಕಳೂ ಸಹ ವ್ಯವಸಾಯ ಮಾಡುತ್ತೇವೆ. ನಾವೆಲ್ಲರೂ ದಾಸರಕಲ್ಲಹಳ್ಳಿ ಗ್ರಾಮದಲ್ಲಿ ವಾಸವಿರುತ್ತೇವೆ. 2005 ನೇ ಇಸವಿಯಿಂದ ಎಲ್ಲಾ ಗಂಡು ಮಕ್ಕಳು ಬೇರೆ ಬೇರೆ ವಾಸಿಸುತ್ತಿದ್ದೇವೆ.

ನನಗೆ ನಮ್ಮ ಊರಿನ ಫರೀದ್ ಖಾನ್ ರವರ ಪರಿಚಯವಿರುತ್ತದೆ. ಅವರಿಗೆ ತಾಲ್ಲೂಕು ಕಛೇರಿಯಲ್ಲಿ ಹಾಗೂ ಉಪ ನೊಂದಣಾಧಿಕಾರಿ ಕಛೇರಿಯಲ್ಲಿ ಓಡಾಡಿ ಅಭ್ಯಾಸವಿರುತ್ತದೆ ಎಂದರೆ ಸರಿ . ಅವರು ನಮ್ಮ ಊರಿನ ಅವಿದ್ಯಾವಂತರಿಗೆ ಖಾತೆ ಮಾಡಲು ಸಹಾಯ ಮಾಡುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅವರು ರಾಜಕೀಯ ಮಾಡಿಕೊಂಡಿರುತ್ತಾರೆ. ಅವರು ಊರಿನಲ್ಲಿ ಗಲಾಟೆ ಆದರೆ ಪೊಲೀಸ್ ಠಾಣೆಗೆ ಬಂದು ಮಧ್ಯಸ್ಥಿಕೆ ವಹಿಸುವ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನನಗೆ ಇಬ್ಬರು ಗಂಡು ಮಕ್ಕಳು. ಅವರಿಬ್ಬರು ಗ್ಯಾರೇಜಿನಲ್ಲಿ ಕೆಲಸ ಮಾಡುತ್ತಾರೆ. ನನಗೆ ನನ್ನ ತಂದೆ ನೀಡಿರುವ 25 ಗುಂಟೆ ಜಮೀನು ಇರುತ್ತದೆ . ನಾನು ತಳ್ಳಿಕಟ್ಟೆ ಗ್ರಾಮದಲ್ಲಿರುವ ಸೊಸೈಟಿಯಲ್ಲಿ ಹಣದ ವ್ಯವಹಾರ ಮಾಡುತ್ತೇನೆ . ನನಗೆ ಹೊಳೆಹೊನ್ನೂರಿನ ಗ್ರಾಮೀಣ ಬ್ಯಾಂಕ್ ನಲ್ಲಿ ಖಾತೆ ಇರುತ್ತದೆ . ಸದರಿ

ಖಾತೆ ತೆರೆದು 1 ವರ್ಷಗಳು ಆಗಿರುತ್ತವೆ. ಮೊದಲು ನಾನು ಸೊಸೈಟಿಯಲ್ಲೇ ವ್ಯವಹಾರ ಮಾಡುತ್ತಿದ್ದೆ. ಬ್ಯಾಂಕ್ ವ್ಯವಹಾರ ಬಗ್ಗೆ ಮಾಹಿತಿ ಇರುತ್ತದೆ . ಸೊಸೈಟಿಯಲ್ಲಿ 20 ವರ್ಷಗಳಿಂದ ವ್ಯವಹಾರ ಮಾಡುತ್ತಿದ್ದೇನೆ. ಸದರಿ ಸೊಸೈಟಿಯಿಂದ ಜಮೀನಿನ ಮೇಲೆ ಸಾಲ ತೆಗೆದುಕೊಳ್ಳುವ ವ್ಯವಹಾರ ಮಾಡುತ್ತೇನೆ. ಈಗ ಸದರಿ ಸಾಲ ಚಾಲ್ತಿಯಲ್ಲಿ ಇರುವುದಿಲ್ಲ. ನನ್ನ ಜಮೀನಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ. ಮಜೀದ್ ಎಂದರೆ ನಾನೇ . ನನ್ನ ಆದಾಯ ಹಾಗೂ ಖರ್ಚಿನ ಬಗ್ಗೆ ಲೆಕ್ಕ ಇಟ್ಟಿರುವುದಿಲ್ಲ. ನಾನು ಸಾಮಾನ್ಯವಾಗಿ ಹಣಕಾಸಿನ ವ್ಯವಹಾರವನ್ನು ಬ್ಯಾಂಕಿನಲ್ಲಿ ಮಾಡುತ್ತೇನೆ.

ನನಗೆ ಹೊಳೆಹೊನ್ನೂರಿನ ಡಿಸಿಸಿ ಬ್ಯಾಂಕಿನಲ್ಲಿ ಖಾತೆ ಇರುತ್ತದೆ . ಸದರಿ ಬ್ಯಾಂಕಿನಿಂದ ನನಗೆ ಪಾಸ್ ಪುಸ್ತಕ ಹಾಗೂ ಚೆಕ್ಕನ್ನು ನೀಡಿರುತ್ತಾರೆ . ಬ್ಯಾಂಕಿಗೆ ಹಣ ಕಟ್ಟಿದರೆ ರಶೀದಿ ನೀಡುತ್ತಾರೆ ಹಾಗೂ ಹಣ ಬೇಕು ಎಂದರೆ ಚೆಕ್ ನೀಡಿ ತೆಗೆದುಕೊಳ್ಳಬಹುದು ಎನ್ನುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಡಿಸಿಸಿ ಬ್ಯಾಂಕಿನ ಪಾಸ್ ಪುಸ್ತಕವನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಡಿಸಿಸಿ ಬ್ಯಾಂಕಿನಲ್ಲಿ ನನ್ನ ಹಣ ಇರುವುದಿಲ್ಲ.

ನಾನು ಸೊಸೈಟಿಯಿಂದ 25-30 ಸಾವಿರ ಹಣ ಸಾಲ ಪಡೆದುಕೊಂಡಿರುತ್ತೇನೆ. ನನ್ನ ಜಮೀನಿಗೆ ಸಂಬಂಧಿಸಿದಂತೆ ವಿಭಾಗ ಪತ್ರ ಹಾಗೂ ಪಹಣಿ ಮ್ಯುಟೇಶನ್ ಇರುತ್ತದೆ . ನನ್ನ ಮನೆಯಲ್ಲಿ ನನ್ನನ್ನು ಹೊರತು ಪಡಿಸಿ ನನ್ನ ಮಕ್ಕಳೂ ಸಹ ವ್ಯವಹಾರ ಮಾಡುತ್ತಾರೆ. ನನ್ನ ಮಕ್ಕಳಿಗೆ ಯಾವ ಬ್ಯಾಂಕಿನಲ್ಲಿ ಖಾತೆ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಅವರ ಆದಾಯ ಹಾಗೂ ಖರ್ಚಿನ ಬಗ್ಗೆ ಲೆಕ್ಕ ಇರುತ್ತದೆ. ಸದರಿ ಲೆಕ್ಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನನ್ನ ಮಕ್ಕಳು ಸ್ವಂತ ಗ್ಯಾರೇಜ್ ಹಾಗೂ ಸ್ವಂತ ಟೈಲ್ಸ್ ಕೆಲಸ ಮಾಡುತ್ತಾರೆ. ನನ್ನ ಗಂಡು ಮಕ್ಕಳಿಗೆ 23 ಹಾಗೂ 24 ವರ್ಷ ವಯಸ್ಸಾಗಿರುತ್ತದೆ . ಈ ದಾವೆಯನ್ನು ಸಲ್ಲಿಸಲು ನಾನೇ ಮಾಹಿತಿ ನೀಡಿರುತ್ತೇನೆ. 1 ನೇ ಪ್ರತಿವಾದಿ ನನ್ನ ತಮ್ಮ ಆತ ವ್ಯವಸಾಯ

ಮಾಡುತ್ತಾನೆ. ನನ್ನ ತಮ್ಮನಿಗೆ ಮಕ್ಕಳು ಇರುವುದಿಲ್ಲ. 1 ನೇ ಪ್ರತಿವಾದಿಗೆ ಹಲವಾರು ವರ್ಷಗಳಿಂದ ಕಾಯಿಲೆ ಇದೆ ಎಂದರೆ ಸರಿ. ಆದ್ದರಿಂದ ಅವರ ವ್ಯವಹಾರವನ್ನು ಅವರ ಹೆಂಡತಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಗೆ ದಾಸರಕಲ್ಲಹಳ್ಳಿ ಗ್ರಾಮದ .ನಂ.. 70/3 ರಲ್ಲಿ 25 ಗುಂಟೆ ಜಮೀನು ವಿಭಾಗ ಪತ್ರದ ಮುಖಾಂತರ ಬಂದಿರುತ್ತದೆ ಎಂದರೆ ಸರಿ. ಸದರಿ ಜಮೀನನ್ನು ಹೊರತು ಪಡಿಸಿ 1 ನೇ ಪ್ರತಿವಾದಿಗೆ ಬೇರೆ ಜಮೀನು ಇಲ್ಲ ಎಂದರೆ ಸರಿ ಆದರೆ ಮನೆ ಇರುತ್ತದೆ. ಜಮೀನಿನ ವ್ಯವಹಾರವನ್ನು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಾರೆ ಎಂದರೆ ಇಬ್ಬರು ಸೇರಿ ನೋಡಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಸಲ್ಲಿಸಿದ ತಕರಾರಿನ ಬಗ್ಗೆ ನನಗೆ ಗೊತ್ತಿರುವುದಿಲ್ಲ. ತಕರಾರಿನ ಬಗ್ಗೆ ವಕೀಲರಿಗೆ ಕೇಳಿ ತಿಳಿದುಕೊಂಡಿರುವುದಿಲ್ಲ. ಸುಮಾರು 2 ವರ್ಷಗಳಿಂದ ನ್ಯಾಯಾಲಯಕ್ಕೆ ಬರುತ್ತಿದ್ದೇನೆ ಎಂದರೆ ಸರಿ. ಈ ಪ್ರಕರಣ ದಾಖಲಿಸುವ ಮೊದಲು ಪ್ರತಿವಾದಿಯರಿಗೆ ನೋಟೀಸು ಕಳುಹಿಸಿರುತ್ತೇನೆ. ಸದರಿ ನೋಟೀಸಿಗೆ ಪ್ರತಿವಾದಿಯರು ಉತ್ತರ ನೀಡಿರುತ್ತಾರೆ ಎಂದರೆ ಸರಿ. ಸದರಿ ಉತ್ತರದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಾನು ಪ್ರತಿವಾದಿಯರಿಗೆ ದಿಃ 11-10-2017 ರಂದು ನೋಟೀಸು ನೀಡಿರುತ್ತೇನೆ. ಜಮೀನನ್ನು ನೊಂದಣಿ ಮಾಡಿಕೊಡಬೇಕೆಂದು ಕೇಳಿ ನೋಟೀಸು ನೀಡಿರುತ್ತೇನೆ. ನಾನು ದಿಃ 11-10-2017 ರಂದು ನೋಟೀಸು ನೀಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ11-10-2017 ರಂದು ಯಾವುದೇ ವ್ಯವಹಾರ ಆಗಿರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ವ್ಯವಹಾರ ಆದರೆ ಬರವಣಿಗೆ ಮಾಡಿಕೊಳ್ಳಬೇಕಕು ಎನ್ನುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಾನು ಈ ಪ್ರಕರಣದಲ್ಲಿ ಕ್ರಯ ಕರಾರು ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ಕ್ರಯ ಕರಾರು ಸ್ಟಾಂಪ್ ಪೇಪರ್ ಮೇಲೆ ಆಗಿರುತ್ತದೆ. ಸದರಿ ಕರಾರನ್ನು ಮುರುಡಪ್ಪರವರು ಬರೆದಿರುತ್ತಾರೆ. ಅವರ ಕಛೇರಿ ನ್ಯಾಯಾಲಯದ ಮುಂದೆ ಇರುತ್ತದೆ . ನನಗೆ ಅವರು ಪರಿಚಯಸ್ಥರು. ಕರಾರು

ಪತ್ರವು 200 ರೂ ಸ್ಟಾಂಪ್ ಪೇಪರ್ ಮೇಲೆ ಬರವಣಿಗೆ ಆಗಿರುತ್ತದೆ. ಸ್ಟಾಂಪ್ ಪೇಪರನ್ನು 1 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿಸಿರುತ್ತೇವೆ. ಜಮೀನಿಗೆ ಸಂಬಂಧಿಸಿದ ವ್ಯವಹಾರ ದಾಸರಕಲ್ಲಹಳ್ಳಿಯಲ್ಲಿ ಫರೀದ್ ಖಾನ್ ರವರ ಮನೆಯಲ್ಲಿ ಆಗಿರುತ್ತದೆ . ಷದರಿ ವ್ಯವಹಾರವು ದಿಃ 11-10-2018 ರಂದು ಸಂಜೆ 7 ರಿಂದ 7-30 ಗಂಟೆ ಆಗಿರುತ್ತದೆ. ಮಾತುಕತೆ ಅರ್ಧ ಗಂಟೆಗಳ ಕಾಲ ನಡೆದಿರುತ್ತದೆ. ಆ ಸಂದರ್ಭದಲ್ಲಿ ಹಲವಾರು ಜನ ಇದ್ದರು. ಆ ಸಂದರ್ಭದಲ್ಲಿ 1 ನೇ ಪ್ರತಿವಾದಿಯಿಂದ ಜಮೀನಿಗೆ ಸಂಬಂಧಿಸಿದ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ. 1 ನೇ ಪ್ರತಿವಾದಿಯ ಜಮೀನು ಭತ್ತದ ಜಮೀನು ಆಗಿತ್ತು. ನನಗೆ ನೊಂದಣಾಧಿಕಾರಿ ಕಛೇರಿಗೆ ಹೋಗಿ ಅಭ್ಯಾಸ ಇದೆ. ನನಗೆ ತಾಲ್ಲೂಕು ಕಛೇರಿ ಎಲ್ಲಿದೆ ಎಂದು ತಿಳಿದಿರುತ್ತದೆ . ವ್ಯವಹಾರ ಆಗುವಾಗ ಮೆಹಬೂಬ್ ಖಾನ್ , ಫರೀದ್ ಖಾನ್ , ಶಾಹೇಜಾನ್ , ಅಬೀಬ್ ಖಾನ್ ಹಾಗೂ ಇನ್ನೂ ಹಲವರು ಇದ್ದರು ಅವರು ಯಾರು ಎಂದು ಹೇಳಲು ಬರುವುದಿಲ. ನೊಂದಣಾಧಿಕಾರಿ ಕವೇರಿ ಮೌಲ್ಯಕ್ಕಿಂತ ಜಮೀನಿನ ಮೌಲ್ಯ ಸಾಮಾ ನ್ಯಾವಾಗಿ ಹೆಚ್ಚು ಇರುತ್ತದೆ ಎಂದರೆ ಸರಿ. ವ್ಯವಹಾರ ಆದ ದಿನ ಉಪನೊಂದಣಾಧಿಕಾರಿ ಕಛೇರಿಯ ಮೌಲ್ಯದ ಬಗ್ಗೆ ದಾಖಲಾತಿ ಪಡೆದುಕೊಂಡಿರುವುದಿಲ್ಲ .ದಾಸರಕಲ್ಲಹಳ್ಳಿಯಲ್ಲಿ 1 ಎಕರೆ ಜಮೀನಿಗೆ 2017-18 ರಲ್ಲಿ 20 ಲಕ್ಷ ಮಾರುಕಟ್ಟೆ ಮೌಲ್ಯ ಇತ್ತು ಎಂದರೆ ಸರಿಯಲ್ಲ.

ಕರಾರು ಪತ್ರದಲ್ಲಿ ಭತ್ತದ ಜಮೀನು ಎಂದು ನಮೂದಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಜಮೀನು ಭಾಗ ಇದ್ದ ಜಮೀನು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ಕು ಬಂದಿಪೂರ್ವಕ್ಕೆ ಮಹಮ್ಮದ್ ಹುಸೇನ್ ರವರ ಸ್ವತ್ತು . ಪಶ್ಚಿಮಕ್ಕೆ ಷಹಜಾನ್ ರವರ ಸ್ವತ್ತು, ಉತ್ತರಕ್ಕೆ ನನ್ನ ಆಸ್ತಿ , ದಕ್ಷಿಣಕ್ಕೆ ಮಹಮ್ಮದ್ ಮುಸ್ತಾಫರವರ

ಆಸ್ತಿ ಇರುತ್ತದೆ. ಉತ್ತರಕ್ಕೆ ನನ್ನ ಜಮೀನು ಇರುವ ಕಾರಣ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ .ನನ್ನ ಮತ್ತು 1 ನೇ ಪ್ರತಿವಾದಿಂದ ಮಧ್ಯೆ ಕರಾರು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 4,60,000 ರೂ.ಗಳಿಗೆ ವ್ಯವಹಾರ ಆಗಿರುತ್ತದೆ .ಆದಿನದ ಮಾರುಕಟ್ಟೆ ಮೌಲ್ಯ ಹಾಗೂ ಭತ್ತದ ಜಮೀನಿನ ಆಧಾರದ ಮೇಲೆ ರೂ. 4,60,000 ರೂ.ಗಳಿಗೆ ವ್ಯವಹಾರ ಆಗಿರುತ್ತದೆ .ಆ ದಿನ ನನ್ನ ಬಳಿ ರೂ.4,60,000 ಇತ್ತು . ಆ ರೀತಿ ಹಣ ಇದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಬಹುದು. ನನ್ನ ಬಳಿ ರೂ.4,60,000 ರೂ.ಇದ್ದ ಬಗ್ಗೆ ಕರಾರಿನಲ್ಲಿ ಬರೆಸಿರುವುದಿಲ್ಲ. ಕಾರಣ ನೊಂದಣಿ ಮಾಡಲು ಸಮಯಾವಕಾಶ ಇತ್ತು. ಕರಾರು ಆದ ದಿನ ನನ್ನ ಖಾತೆಯಲ್ಲಿ 1 ಲಕ್ಷ ಇತ್ತು ಎಂದು ತೋರಿಸಲು ದಾಖಲೆ ಇಲ್ಲ. 4,60,000 ರೂ.ಗಳಿಗೆ ವ್ಯವಹಾರ ಆಗಿ ನಾನು 1 ಲಕ್ಷ ಮುಂಗಡ ಹಣವನ್ನು ನೀಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಾಕಿ ಮೊತ್ತವನ್ನು ಬ್ಯಾಂಕ್ ಕ್ಲಿಯರೆನ್ಸ್ ನೀಡಿದ ದಿನ ಕೊಡಬೇಕು ಎಂದು ವ್ಯವಹಾರ ಆಗಿತ್ತು. ಆ ಬಗ್ಗೆ ಕರಾರು ಪತ್ರದಲ್ಲಿ ನಮೂದಿಸಿರುತ್ತೇವೆ . ವ್ಯವಹಾರ ಆದ ದಿನ ಪ್ರತಿವಾದಿಗೆ ಬ್ಯಾಂಕಿನಲ್ಲಿ ಸಾಲ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ನನ್ನ ಮತ್ತು ಪ್ರತಿವಾದಿ ಮಧ್ಯೆ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವ್ಯವಹಾರ ಆದ ದಿನ ಫರೀದ್ ಖಾನ್ರವರ ಮನೆಯಲ್ಲಿ ಯಾವುದೇ ಬರವಣಿಗೆ ಆಗಿರುವುದಿಲ್ಲ. ಮಾರನೇ ದಿನ ಕರಾರು ಪತ್ರ

ತಯಾರಿಸಿಕೊಂಡಿರುತ್ತೇವೆ . ಮಾರನೇ ದಿನ ಮುರುಡಪ್ಪರವರ ಕಛೇರಿಯಲ್ಲಿ ಕ್ರಯ ಕರಾರು ಮಾಡಿ 1 ಲಕ್ಷ ರೂ. ವನ್ನು ಮುಂಗಡವಾಗಿ ನೀಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಪರೀದ್ ಖಾನ್ರವರು ಸೇರಿ ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯಾವಕಾಶ ನೀಡಲಾಯಿತು.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,
ಓ.ಹೇ.ಕೇ.ಸರಿ.ಇದೆ.

(ನಾಸಿರ ಬಾನು)
2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಭದ್ರಾವತಿ